ಕಥೆ

# ಕುರ್ಚಿ



## ಎಸ್. ಶೇಷಾದ್ರಿ ಕಿನಾರ

ಕಲೆ: ಎಸ್.ವಿ. ಹೂಗಾರ್

ಭಗವಂತರಾಯರು ಪ್ರತಿದಿನ ರಾತ್ರಿ ಹತ್ತು ಗಂಟೆಗೆ ಆಪ್ತ ಕೋಣೆಗೆ ದಯಮಾಡಿಸುತ್ತಾರೆ. ಆ ಕೋಣೆ ಹಳೆಯಕಾಲದ್ದು. ಅದರ ಮೇಲಿನ ಪ್ರೀತಿಯಿಂದಾಗಿ ಹಾಗೆ ಉಳಿಸಿಕೊಂಡಿದ್ದಾರೆ! ಆ ಕೋಣೆಯ ತೊಲೆಯ ಜಂತಿಗೆ, ಸಂಕ್ರಾಂತಿಯಲ್ಲಿ ಎತ್ತಿನ ಕೋಡಿಗೆ ಕಟ್ಟುವ ಬಾಸಿಂಗವನ್ನು ಕಟ್ಟಿದೆ. ಅದಕ್ಕೆ ಆ ಜಂತಿ ಒಂದು ಮದುವೆಯ ಗಂಡಿನಂತೆ ಕಾಣುತ್ತಿದೆ. ದೂಳೂ ತುಂಬಿ ಅದು ಕರಿ ಬಡಿದು ಹೋಗಿದೆ. ಅದರ-ಬೇಗಡೆ ಕುಚ್ಚುಗಳು ಜಿರಲೆ ಇತ್ಯಾದಿಗಳಿಗೆ ಸಿಕ್ಕು ತನ್ನ ಸೌಂದರ್ಯವನ್ನು ಕಳೆದುಕೊಂಡಿದೆ. ಕೋಣೆಯ ಗೋಡೆಯ ಮೇಲೆ ಯಾವುದೋ ಒಂದು ಹಳೆಯ ಗಾಜಿಲ್ಲದ ಫೋಟೊ. ಆ ಚಿತ್ರದಲ್ಲಿದ್ದಾತ ಮೈಸೂರು ರುಮಾಲು ಸುತ್ತಿಕೊಂಡಿದ್ದ. ಕರಿ ಕೋಟಿನ ಮೇಲೆ ಕಾಣುವಂತೆ ಬಂಗಾರದ ಚೈನು. ರೊಣೆಯಾದ ಮೀಸೆ. ಮುಖವೆಲ್ಲ ಜಿರಲೆ, ತಿಗಣೆ, ಇರುವೆಗಳ ಬಾಯಿಗೆ ಸಿಕ್ಕು ತಾತಾ ತೂತಾಗಿ ಹೋಗಿದೆ. ಆ ಕೋಣೆಯ ಒಂದು ಗೋಡೆಯಲ್ಲಿ ಪೂರ್ವಾಭಿಮುಖವಾಗಿ ಗಣಪತಿ ಗೂಡು. ಅದರ ತುಂಬಾ ಗಂಗೆ ಥಾಲಿಗಳು, ಹಳೇ ಪಂಚಾಂಗಗಳು, ಹಪ್ಪಾದ ಕೆಲ ಅಂಚೆ ಕಾರ್ಡು, ಲಗ್ನ ಪತ್ರಿಕೆಗಳು. ಅಟ್ಟದ ಒಂದು ಬದಿಯಲ್ಲಿ ಹಳೆಯ ಕಾಲದ ಪಾತ್ರೆಗಳು. ಮುರಿದ ಸೌಟು, ತೂತು ಬಿದ್ದ ಕಂಠ ನೆಗ್ಗಿದ ಕೊಡ, ಚೊಂಬು, ಮರದ ಹಿಡಿ ಮುರಿದುಹೊದ ಛತ್ರಿ. ಅದರಲ್ಲಿ ಜಿರಲೆ, ಜೊಂಡಿಗಗಳು ವಾಸಿಸುತ್ತಿದ್ದವು. ಇಂತಹ ಕೋಣೆಗೆ ಶೋಭಾಯಮಾನವಾಗಿ ಕೂತ ಧಡೂತಿ ಬೀಟೆ ಮರದ ಕುರ್ಚಿ ಕರಿಗೆ ಹೊಳೆಯುತ್ತಿದೆ. ಅದು ಸಿಂಹಾಸನದಂತೆ ದೊರೆ ಮಗನ ಹಾಗೆ ಕೂತಿದೆ. ಇಡೀ ಅಟ್ಟವನ್ನೇ ಒಂದು ಸಾಮ್ರಾಜ್ಯವನ್ನಾಗಿಸಿಕೊಂಡು ಅಲ್ಲಿನ ಸಮಸ್ತ ವಸ್ತು ಪ್ರಾಣಿಗಳಿಗೆ ತಾನೇ 'ರಾಜ' ಎಂಬಂತೆ ಎಲ್ಲವನ್ನು ಆಳುತ್ತಾ ಬಂದಿದೆ.

* * *

ಭಗವಂತರಾಯರು ಮಾತಿನಲ್ಲಿ ಜಾಣರು. ಮಾತಿನಲ್ಲಿ ಮೋಡಿ ಮಾಡಿ ಜನರನ್ನ ವಶಪಡಿಸಿ ಕೊಳ್ಳಬಲ್ಲರು. ಈ ಮಾತಿಗೆ ಮರುಳಾದ ಜನ ಸೈಟು, ಮನೆ, ಗದ್ದೆ, ತೋಟ ಎಂದೆಲ್ಲ ವ್ಯವಹರಿಸುತ್ತ ತಮ್ಮ ಆಸೆಗಳನ್ನ ದಿನೇದಿನೇ ಮರಿ ಮಾಡಿಕೊಳ್ಳುತ್ತ ಭಗವಂತರಾಯರ ಮಾತಿಗೆ ಮರುಳಾದರು. ರಾಯರು ಸುಳ್ಳನ್ನೆಂದೂ ಆಡದೇ ಅಥವಾ ಆಡಿದ್ದೆಲ್ಲ ನಿಜವನ್ನಾಗಿಸಿ ಆಸೆ ಮೇಲೊಂದಾಸೆ ತೋರಿಸುತ್ತ ನಡೆದರು. ಕುರುಡು ಕಾಂಚಾಣವನ್ನು ಕುಣಿಸತೊಡಗಿದ್ದರು.

ಆ ಕೋಣೆಯ ಬಾಸಿಂಗದ ಕೆಳಗೆ ಒಂದು ಪಾತಾಳ ಗಡಗ ಅಸ್ಥಿಪಂಜರದಂತೆ ನೇತು ಬಿದ್ದಿತ್ತು. ಅದು ಬಹಳ ಹಿಂದೆ ಬಾವಿಯಲ್ಲಿ ಮುಳುಗಿದ್ದ ಕಂಠ ಕಳಚಿಕೊಂಡು ಮುಳುಗಿದ ಕೊಡ, ನೆಗ್ಗಿದ ಚೊಂಬು, ಯಾವುದೋ ಪ್ರಾಣಿಯ ತಲೆ... ಹೀಗೆ ಅನೇಕ ವಸ್ತುಗಳನ್ನು ತೆಗೆದು ದಡಕ್ಕೆ ಹಾಕಿದೆ. ಅದನ್ನ ನೋಡಿದಾಗಲೆಲ್ಲ ಭಗವಂತರಾಯರಿಗೆ ತನ್ನ ಹೊಟ್ಟೆ ಎಂಬ ಬಾವಿಯಿಂದ